# ‘ಚಹಾ ಕುಡಿಯಿರಿ’

ಮೂಲ ಹಿಂದೀ: **ಸ್ವಾಮಿ ಜಪಾನಂದ** ಕನ್ನಡಕ್ಕೆ : **ರೂಪಶ್ರೀ ನಾಗರಾಜ್**



ಪರಿವ್ರಾಜಕ ಸಂನ್ಯಾಸಿಯು ಉತ್ತರಾಖಂಡದಲ್ಲಿ ಹಿಮಾಲಯ ಪರ್ವತದಲ್ಲಿ ಅಲೆದಾಡುತ್ತಿದ್ದ, ಪವಿತ್ರ ತೀರ್ಥಕ್ಷೇತ್ರ ಗಂಗೋತ್ರಿಯಲ್ಲಿ ಸ್ವಲ್ಪ ದಿನ ತಂಗಿದ್ದು, ಸ್ವಾತ್ಮಾನಂದದ ಅನುಭವವನ್ನು ತನ್ನದಾಗಿಸಿಕೊಳ್ಳುತ್ತ ಆರೋಗ್ಯ ಸುಧಾರಿಸಿದ ನಂತರ ಈಗ ಎರಡು ಧಾಮಗಳಾದ ಶ್ರೀ ಕೇದಾರನಾಥ ಮತ್ತು ಶ್ರೀ ಬದರೀನಾರಾಯಣ ಇವುಗಳ ದರ್ಶವನ್ನು ಮಾಡಿ, ಕೆಳಗೆ ಹರಿದ್ವಾರ–ಋಷಿಕೇಶದ ಕಡೆಗೆ ಇಳಿಯುವ ವಿಚಾರ ಮಾಡಿ, ಅದೇ ಉದ್ದೇಶದಲ್ಲೇ ಹೊರಟ. ದಾರಿಯಲ್ಲಿ ಅವನು ತ್ರಿಯುಗಿ ನಾರಾಯಣ ತೀರ್ಥವನ್ನು ಸಂದರ್ಶಿಸಿ, ಶ್ರೀ ಕೇದಾರಕ್ಕೆ ಹೋಗುವ ನಿಶ್ಚಯವನ್ನು ಮಾಡಿದ ಮತ್ತು ಒಬ್ಬ ಪರಿಚಿತನಾದ ಪಹಾಡಿಯ ಹೇಳಿಕೆಯ ಮೇರೆಗೆ ಮಾಮೂಲಿನ ರಸ್ತೆಯನ್ನು ಬಿಟ್ಟು, ಒಂದು ನಿರ್ಜನವಾದ ಕಾಲುದಾರಿಯಿಂದ ಹೊರಡಲು ಪ್ರಾರಂಭಿಸಿದ.

ಆದರೆ ದಾರಿಯ ಮಧ್ಯದಲ್ಲಿ ಎಂಥಾ ಜೋರು ಮಳೆಯಾಯಿತೆಂದರೆ ಅವನಿಗೆ ಗಾಬರಿಯಾಗಿ, ಬಹಳ ಕಷ್ಟದಿಂದ ಒಂದು ಸಣ್ಣ ಹಳ್ಳಿಯ ಹತ್ತಿರ ಒಂದು ಗುಡಿಸಿಲಿಗೆ ಬಂದು ಸೇರಿದ. ಅದು ಈ ಕಾಲುದಾರಿಯಿಂದ ದೂರ, ಆದರೆ ಮಾಮೂಲಿ ರಸ್ತೆಯಿಂದ ಹತ್ತಿರವಾಗಿತ್ತು, ಅಲ್ಲಿ ಒಳಗೆ ಹೋಗಿ ನೋಡಿದರೆ, ಬಹಳಷ್ಟು ಯಾತ್ರಿಗಳು ಈಗಾಗಲೇ ಬಂದು ಸೇರಿದ್ದಾರೆ. ಮಳೆಯ ಕಾರಣದಿಂದಾಗಿ ಅತ್ತಿತ್ತ ಓಡಾಡಲೂ ಸಾಧ್ಯವಿಲ್ಲದಾಗಿ, ಅಲ್ಲೇ ಕುಳಿತಿದ್ದರು. ಒಬ್ಬ ಸಜ್ಜನರು ತಾವು ಇಳಿದುಕೊಂಡಿರುವ ಸ್ಥಳದಲ್ಲೇ ಸ್ವಲ್ಪ ಒತ್ತುವರಿ ಮಾಡಿ, ಸಂನ್ಯಾಸಿಗೆ ಜಾಗ ಮಾಡಿಕೊಟ್ಟರು. ಸಂನ್ಯಾಸಿಯು ಅವರಿಗೆ ಧನ್ಯವಾದ ಹೇಳಿ ಅಲ್ಲಿ ಆಶ್ರಯ ಪಡೆದ. ಎರಡು ದಿನ ಅಲ್ಲೇ ಕಳೆಯಬೇಕಾಯಿತು, ಮೂರನೇ ದಿನ ಮಧ್ಯಾಹ್ನದ ಹೊತ್ತಿಗೆ ಮಳೆಯ ನಿಂತಿತು. ನಾಲ್ಕೂ ದಿಕ್ಕಿನಲ್ಲಿ ಹರಡಿ ನಿಂತಿದ್ದ ಬೆಟ್ಟಗಳ ಶಿಖರಗಳು ಬಿಳೀ ಹೊದ್ದಿಕೆಯಿಂದ ಆವೃತವಾಗಿದ್ದಂತೆ ಕಾಣುತ್ತಿದ್ದವು. ಹಿಮಬಿದ್ದು ಈ ರೀತಿಯ ಅಪೂರ್ವ ದೃಶ್ಯ ಉಂಟಾಗಿತ್ತು. ಅದೊಂದು ಅವರ್ಣನೀಯ ದೃಶ್ಯ. ಅದು ದಿವ್ಯತೆಯ ದ್ಯೋತಕವಾಗಿತ್ತು.

ಸಂನ್ಯಾಸಿಗೆ ಈಗ ಅಲ್ಲಿ ಉಳಿಯಲು ಕಷ್ಟವಾಗಿತ್ತು, ಊಟದ ವ್ಯವಸ್ಥೆಯೂ ಇರಲಿಲ್ಲ. ಬೇರೆ ಯಾತ್ರಿಕರೂ ಇದ್ದ ಕಾರಣ, ಸ್ಥಳದ ಅಭಾವವೂ ಇತ್ತು. ಅವನ ಉದ್ದೇಶವೂ ಅಲ್ಲಿಂದ ಹೊರಡುವುದು ಎಂದೇ ಇದ್ದಿದ್ದರಿಂದ, ಅಲ್ಲಿಂದ ಹೊರಟುಬಿಟ್ಟ. ಒಬ್ಬ ತಪ್ಪಲಿನ ವಾಸಿಯೊಬ್ಬನನ್ನು ವಿಚಾರಿಸಿ, ಮತ್ತೆ ಅದೇ ಮುಂಚಿನ ಕಾಲುದಾರಿಯಲ್ಲೇ ಸಾಗಿ, ತ್ರಿಯುಗೀ ನಾರಾಯಣ ತೀರ್ಥದ ಹತ್ತಿರದಿಂದ ಹೊರಟ. ಒಂದು ರಸ್ತೆಯಲ್ಲಿ ಯಾರೂ ಸಿಗಲಿಲ್ಲ ಮತ್ತು ಹಿಮದ ಕಾರಣ ದಾರಿ ತಪ್ಪಿ, ಎಲ್ಲಿಂದೆಲ್ಲಿಗೋ ಬಂದು ತಲುಪಿದ, ಅದೂ ಸಹ ಹಿಮದಿಂದ ಮುಚ್ಚಿಹೋಗಿತ್ತು.

ಆಗ ತಾನೇ ಹಿಮ ಬಿದ್ದಿದ್ದ ಕಾರಣ, ಇದೇ ಕಾಲುದಾರಿ ಇರಬಹುದು ಎಂದು ಅಂದಾಜು ಮಾಡಬಹುದಾಗಿತ್ತು. ಆದರೆ ಹತ್ತಿಯಂತೆ ಮೃದುವಾಗಿದ್ದ ಹಿಮದ ಕಾರಣ, ಬಿರಿಗಾಲಿನಲ್ಲಿದ್ದದ್ದರಿಂದ, ಥಂಡಿಯಿಂದ ಬುದ್ಧಿ ಶೂನ್ಯವಾಗಿಬಿಟ್ಟಿತು.

ಯಾವುದೋ ಮರದ ಒಂದು ಗೆಲ್ಲಿನ ಸಹಾಯದಿಂದ ಯಾಂತ್ರಿಕವಾಗಿ ಮುಂದೆ ಹೆಜ್ಜೆ ಹಾಕತೊಡಗಿದ. ಕೈಬೆರಳುಗಳೂ ಥಂಡಿಗೆ ಮರಗಟ್ಟಿ ನಿಂತವು. ಕಮಂಡಲು ಮತ್ತು ಕೋಲಿನ ಮೇಲೆ ಹಿಡಿತ ತಪ್ಪುತ್ತಿತ್ತು, ಕೈ ಜಾರುತ್ತಿತ್ತು. ಉಸಿರು ಹೊರ ಬಂದು ಮೀಸೆಯ ಮೇಲೆಯೇ ನಿಂತಿತು, ಮೂಗಿನ ತುದಿಯೆಲ್ಲ ಮರಗಟ್ಟಿತು, ಭಯವಾಯಿತು. ಆದರೆ ಈಗ ಉಪಾಯ ತಾನೇ ಏನಿತ್ತು ? ಹೇಗೋ ಒಂದು ರೀತಿ ಜಾರುತ್ತಾ, ತೂರಾಡುತ್ತಾ ಸಾಗತೊಡಗಿದ. ಹಿಮದಲ್ಲೇ ಎಲ್ಲವೂ ತಣ್ಣಗಾಗಿ ಬಿಡುವುದೆ? ಬದುಕಿನ ಕೊನೆಯೇ ಬಂದುಬಿಟ್ಟಿತೆ? ಮುಂದಿನ ಪ್ರಶ್ನೆಗಳು ತಲೆಯಲ್ಲಿ ಗಿರಕಿ ಹೊಡೆಯತೊಡಗಿದವು. ಅಷ್ಟರಲ್ಲೇ ನೋಡಿದರೆ, ಹಿಮವು ಕಮ್ಮಿಯಾಗಿತ್ತು. ಕೆಳಗೆ ದಾರಿ ಕಾಣಿಸುತ್ತಿತ್ತು. ಆ ದಾರಿಯ ಹತ್ತಿರದಲ್ಲೇ ಒಂದು ಗುಡಿಸಿಲಿನಲ್ಲಿ ಒಂದು ಟಿಬೆಟಿಯನ್ ಕುಟುಂಬವು ಕುರಿಮಂದೆಯನ್ನು ಇಟ್ಟುಕೊಂಡು ಜೀವನ ಮಾಡುತ್ತಿತ್ತು, ಬೆಂಕಿ ಹೊಗೆಯಾಡುತ್ತ ಒಲೆ ಉರಿಯುತ್ತಿತ್ತು. ಜೈ ಭಗವಾನ್! ಓಡುತ್ತ ಬೀಳುತ್ತ ಕೆಳಗೆ ಇಳಿಯತೊಡಗಿದ ಮತ್ತು ಆ ಗುಡಿಸಿಲಿನ ಹತ್ತಿರ ಬಂದು ಸೇರಿದ.

ಆ ಟಿಬೆಟಿಯನ್ ಸೋದರ ಇವನನ್ನ ನೊಡುತ್ತಲೇ ಪರಿಸ್ಥಿತಿ ಗಂಭೀರವಾಗಿದೆ ಎಂದು ಅರಿತುಕೊಂಡ – ಸಂನ್ಯಾಸಿಯು ಚಳಿ ಮತ್ತು ಹಿಮದಿಂದ ತೋಯ್ದುಹೋಗಿದ್ದ. ಅವನು ತಕ್ಷಣವೇ ಬೆಂಕಿಗೆ ಮತ್ತಷ್ಟು ಇಂಧನ ಹಾಕಿ, ಸಂನ್ಯಾಸಿಯನ್ನು ಆಮಂತ್ರಿಸಿದ. ಈ ಆಮಂತ್ರಣದಿಂದ ಸಂನ್ಯಾಸಿಗೆ ಬಹಳ ಪ್ರಸನ್ನತೆ ಉಂಟಾಯಿತು ಮತ್ತು ಹತ್ತಿರದಲ್ಲೇ ಕುಳಿತು ಏದುಸಿರು ಬಿಡತೊಡಗಿದ. ಸ್ವಲ್ಪ ಸಮಯದವರೆಗೆ ಅವನಿಗೆ ಮಾತನಾಡಲೂ ಸಾಧ್ಯವಾಗಲಿಲ್ಲ. ಬಿಸಿಯಾದ ಚಹಾದ ಬಟ್ಟಲನ್ನು ಮುಂದಿಟ್ಟು, ಟಿಬೆಟಿಯನ್ ದಂಪತಿಗಳು ಬಹಳ ಪ್ರೀತಿಯಿಂದ ಹೇಳಿದರು– ''ಚಾತುಮ್, ಚಾತುಮ್ (ಚಹಾ ಕುಡಿಯಿರಿ)'' ಮತ್ತು ಸಂಜ್ಞೆ ಮಾಡಿ ಹೇಳತೊಡಗಿದರು. ''ದೇಹ ಈಗ ಬಿಸಿಯಾಗುತ್ತದೆ, ಶರೀರದಲ್ಲಿ ಚೈತನ್ಯ ಬರುತ್ತದೆ''. ನಾಲ್ಕೈದು ಬಟ್ಟಲುಗಳಷ್ಟು ಚಹಾ ಕುಡಿದ ಮೇಲೆ ಸ್ವಲ್ಪ ಸರಿಯಾಯಿತು ಎನ್ನಿಸಿತು, ಅಗ್ನಿದೇವ ಹೇಗೋ ದೈಹಿಕ ತಾಪವನ್ನು ಹೆಚ್ಚಿಸಿ ಸಂಜೀವಿನೀ ಶಕ್ತಿಯನ್ನು ನೀಡುತ್ತಿದ್ದ. ಈ ಆಮಂತ್ರಣ ಮತ್ತು 'ಚಾ ತುಮ್' ಎನ್ನುವುದರಲ್ಲಿ ಇತ್ತು, ಮಾನವತೆಯ ಒಂದು ಸ್ಪಷ್ಟ ನಿದರ್ಶನ.

## ರಾಮಕೃಷ್ಣ ತಪೋವನ

(ರಾಮಕೃಷ್ಣ ಮಠ ಹಾಗೂ ರಾಮಕೃಷ್ಣ ಮಿಷನ್, ಬೇಲೂರು ಮಠ, ಪಶ್ಚಿಮ ಬಂಗಾಳ
ಇದರ ಮಾರ್ಗದರ್ಶನದಲ್ಲಿ ನಡೆಯುವ **ಕರ್ನಾಟಕ ರಾಮಕೃಷ್ಣ-ವಿವೇಕಾನಂದ ಭಾವ ಪ್ರಚಾರ ಪರಿಷತ್** ಇದರ ಸದಸ್ಯತ್ವ ಹೊಂದಿದ ಸಂಸ್ಥೆ)

E-mail : ramakrishnatapovan@gmail.com, website : www.ramakrishnatapovan.org

## ರಾಮಕೃಷ್ಣ ತಪೋವನ ಬಾಲಕಾಶ್ರಮ, ಪೊಳಲಿಯಲ್ಲಿ ಉಚಿತ ವಸತಿ ಸೌಲಭ್ಯ

### ಅರ್ಜಿ ಆಹ್ವಾನ

ಆರ್ಥಿಕವಾಗಿ ಹಿಂದುಳಿದ ಮತ್ತು ನಾನಾ ಕಾರಣಗಳಿಂದ ವಿದ್ಯಾಭ್ಯಾಸವನ್ನು ಮುಂದುವರಿಸಲು ಸಾಧ್ಯವಾಗದ ಗ್ರಾಮೀಣ ಪ್ರತಿಭಾವಂತ ಹುಡುಗರಿಗೆ ಶಿಕ್ಷಣಕ್ಕೆ ನೆರವಾಗುವ ಅನ್ವಯ **ರಾಮಕೃಷ್ಣ ತಪೋವನ ಬಾಲಕಾಶ್ರಮವು** ಅರ್ಜಿ ಆಹ್ವಾನಿಸಿದೆ.

ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಹಾಗೂ ನೆರೆಯ ಜಿಲ್ಲೆಗಳ, 7ನೇ ತರಗತಿಯಲ್ಲಿ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು 8ನೇ ತರಗತಿಗೆ ಸೇರಬಹುದು. ಉಚಿತ ಶಿಕ್ಷಣ, ಊಟ ಮತ್ತು ವಸತಿ ಒದಗಿಸಲಾಗುವುದು. ಜೊತೆಗೆ ಭಜನೆ, ಸಂಗೀತ, ಯಕ್ಷಗಾನ, ತೋಟಗಾರಿಕೆ, ಕಂಪ್ಯೂಟರ್, ಶ್ರಮಸೇವೆ, ಭರತನಾಟ್ಯ ಇತ್ಯಾದಿ ತರಬೇತಿ ನೀಡಲಾಗುತ್ತದೆ. ಸುಂದರ ಹಳ್ಳಿಯ ಪರಿಸರದಲ್ಲಿ ಈ ಬಾಲಕಾಶ್ರಮವಿದ್ದು, ಆಸಕ್ತಿಯಿದ್ದ ಹುಡುಗರು 7ನೇ ತರಗತಿಯ ಪರೀಕ್ಷೆ ಮುಗಿದ ಕೂಡಲೇ ವೈಯಕ್ತಿಕ ವಿವರಗಳೊಂದಿಗೆ ದೂರವಾಣಿ ಇಲ್ಲವೆ ಅಂಚೆಯ ಮೂಲಕ ಸಂಪರ್ಕಿಸಬಹುದು. ಬಾಲಕಾಶ್ರಮದ ಪರಿಚಯ-ಮಾಹಿತಿಗಾಗಿ ವಿದ್ಯಾರ್ಥಿಗಳು ಒಂದು ವಾರ ಬಾಲಕಾಶ್ರಮದಲ್ಲಿ ಉಳಿದುಕೊಳ್ಳಬೇಕಾಗುತ್ತದೆ. ಮಕ್ಕಳ ಮೇಲ್ವಿಚಾರಣೆಯನ್ನು ಸ್ವತಃ ಸ್ವಾಮೀಜಿಯವರೇ ವಹಿಸಿಕೊಳ್ಳುವರು.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ :**

**ರಾಮಕೃಷ್ಣ ತಪೋವನ, ಶ್ರೀರಾಜರಾಜೇಶ್ವರಿ ದೇವಸ್ಥಾನದ ಬಳಿ,**
**ಕರಿಯಂಗಳ ಗ್ರಾಮ, ಪೊಳಲಿ ಅಂಚೆ, ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ 574 219**
ದೂರವಾಣಿ ಸಂಖ್ಯೆ : 9845165108, 9481846545, 0824-2016455